प्रेस प्रकाशनी PRESS RELEASE

भारतीय रिज़र्व बैंक
RESERVE BANK OF INDIA

संचार विभाग, केंद्रीय कार्यालय, एस.बी.एस.मार्ग, मुंबई-400001
Department of Communication, Central Office, S.B.S.Marg, Mumbai-400001
फोन/Phone: 022- 22660502

वेबसाइट : www.rbi.org.in/hindi
Website : www.rbi.org.in
ई-मेल/email: helpdoc@rbi.org.in

ಜನವರಿ 2, 2019

**ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಗಾತ್ರ ಉದ್ದಿಮೆಗಳಿಗಾಗಿ (ಎಂ ಎಸ್ ಎಂ ಇ ಗಳು) ಒಂದು ತಜ್ಞರ ಸಮಿತಿಯನ್ನು ಭಾರತೀಯ ರಿಸರ್ವ್ ಬ್ಯಾಂಕ್ ರಚಿಸಿದೆ**

ಭಾರತೀಯ ಅರ್ಥ ವ್ಯವಸ್ಥೆಯಲ್ಲಿ ಎಂ ಎಸ್ ಎಂ ಗಳಿಗೆ ಇರುವ ಪ್ರಾಮುಖ್ಯತೆಯನ್ನು ಗಮನದಲ್ಲಿ ಇರಿಸಿಕೊಂಡು, ಎಂ ಎಸ್ ಎಂ ಇ ಗಳ ಸಾಧನೆಗಳಿಗೆ ಅಡ್ಡಿ ಬರುವ ಅಂಶಗಳು ಹಾಗೂ ತೊಡಕುಗಳನ್ನು ಅರಿತುಕೊಳ್ಳುವ ಅಗತ್ಯವಿದೆ. ಆದ್ದರಿಂದ ಇದರ ಮೂಲ ಕಾರಣಗಳನ್ನು ಕಂಡು ಹಿಡಿಯುವ ಉದ್ದೇಶಕ್ಕಾಗಿ ಇದರ ಸಮಗ್ರ ಪರಿಶೀಲನೆ ಮಾಡುವ ಅಗತ್ಯ ಕಂಡು ಬಂದಿದೆ ಮತ್ತು ಎಂ ಎಸ್ ಎಂ ಇ ವಲಯದ ಆರ್ಥಿಕ ಶಕ್ತಿ ಮತ್ತು ಆರ್ಥಿಕ ಸ್ಥಿರತೆ ಸಂಬಂಧ ದೀರ್ಘ ಕಾಲಿಕ ಪರಿಹಾರ ಮಾರ್ಗಗಳನ್ನು ಕಂಡುಕೊಳ್ಳಬೇಕಿದೆ.

ಇದಕ್ಕಾಗಿ, ದಿನಾಂಕ 2018-19 ರ ಐದನೇ ದ್ವೈಮಾಸಿಕ ವಿತ್ತೀಯ ನೀತಿ ವರದಿಯಲ್ಲಿ, ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ದಿಮೆಗಳಿಗಾಗಿ ಒಂದು ತಜ್ಞರ ಸ್ಮಿತಿಯನ್ನು ಆರ್ ಬಿ ಐ ರಚಿಸುವುದಾಗಿ ತಿಳಿಸಿದೆ. ಅದರಂತೆ ಈ ಕೆಳಗೆ ಸೂಚಿಸಿರುವ ವ್ಯಕ್ತಿಗಳನ್ನೊಳಗೊಂಡ ಸಮಿತಿಯನ್ನು ಆರ್ ಬಿ ಐ ರಚಿಸಿದೆ.

| | | |
|---|---|---|
| 1 | ಶ್ರೀ ಯು.ಕೆ ಸಿನ್ಹಾ<br>ಮಾಜೀ ಅಧ್ಯಕ್ಷರು – SEBI | ಅಧ್ಯಕ್ಷರು |
| 2 | ಶ್ರೀ ರಾಮ್ ಮೋಹನ್ ಮಿಶ್ರಾ<br>ಹೆಚ್ಚುವರಿ ಕಾರ್ಯದರ್ಶಿ, ಅಭಿವೃದ್ಧಿ ಆಯುಕ್ತರು, ಎಂ ಎಸ್ ಎಂ ಇ | ಸದಸ್ಯರು |
| 3 | ಶ್ರೀ ಪಂಕಜ್ ಜೈನ್<br>ಜಂಟಿ ಕಾರ್ಯದರ್ಶಿ, ಹಣಕಾಸು ಸೇವಾ ಇಲಾಖೆ, ಆರ್ಥಿಕ ಸಚಿವಾಲಯ | ಸದಸ್ಯರು |
| 4 | ಶ್ರೀ ಪಿ. ಕೆ. ಗುಪ್ತಾ<br>ವ್ಯವಸ್ಥಾಪಕ ನಿರ್ದೇಶಕರೂ, ಭಾರತೀಯ ಸ್ಟೇಟ್ ಬ್ಯಾಂಕ್ | ಸದಸ್ಯರು |
| 5 | ಶ್ರೀ ಅನೂಪ್ ಬಾಗ್ಚಿ<br>ಕಾರ್ಯ ನಿರ್ವಾಹಕ ನಿರ್ದೇಶಕರು ಐ ಸಿ ಐ ಸಿ ಐ ಬ್ಯಾಂಕ್ | ಸದಸ್ಯರು |
| 6 | ಶ್ರೀ ಅಭಿಮಾನ್ ದಾಸ್<br>ಪ್ರಾಧ್ಯಾಪಕರು, ಐ ಐ ಎಂ- ಅಹ್ಮದಾಬಾದ್ | ಸದಸ್ಯರು |
| 7 | ಶ್ರೀ ಶರದ್ ಶರ್ಮಾ<br>ಸಹ- ಸಂಸ್ಥಾಪಕರು, iSPIRIT ಫೌಂಡೇಶನ್ | ಸದಸ್ಯರು |
| 8 | ಕು. ಬಿಂದು ಅನಂತ್,<br>ಅಧ್ಯಕ್ಷರು, ದ್ವಾರ ಟ್ರಸ್ಟ್ | ಸದಸ್ಯರು |

ಸಮಿತಿಯು ಕೆಳಕಂಡ ಕರ್ತವ್ಯಗಳನ್ನು ನಿರ್ವಹಿಸಬೇಕಿದೆ.

i. ಎಂ ಎಸ್ ಎಂ ಎ ವಲಯಕ್ಕೆ ಬೆಂಬಲವಾಗಿ ಈಗಿರುವ ಸಾಂಸ್ಥಿಕ ಚೌಕಟ್ಟುಗಳ ಅವಲೋಕನ

ii. ಇತ್ತೀಚಿಗಿನ ಸುಧಾರಣೆಗಳು ಈ ವಲಯದ ಮೇಲೆ ಬೀರಿರುವ ಪರಿಣಾಮಗಳ ಅಧ್ಯಯನ ಮತ್ತು ರಚನಾ ಸ್ವರೂಪದಲ್ಲಿ ಇರುವಂತಹ, ಈ ವಲಯದ ಬೆಳವಣಿಗೆಗೆ ತೊಡಕಾಗಿರುವ ಸಮಸ್ಯೆಗಳನ್ನು ಗುರುತುಸಿವಿಕೆ

iii. ಈ ವಲಯಕ್ಕೆ ಸಾಕಷ್ಟು ಮತ್ತು ಕಾಲ ಕಾಲಕ್ಕೆ ಹಣಕಾಸು ನೆರವು ಸಿಗದೇ ಇರುವುದಕ್ಕೆ ಇರುವ ಕಾರಣಗಳ ಪರಿಶೀಲನೆ

iv. ಎಂ ಎಸ್ ಎಂ ಇ ಗಳ ಸಂಬಂಧ ಪ್ರಪಂಚದಲ್ಲಿ ಇರುವ ಉತ್ತಮ ಆಚರಣೆಗಳ ಅಧ್ಯಯನ ಮತ್ತು ಭಾರತದಲ್ಲಿ ಅಳವಡಿಸಬಹುದಾದ ಕಡೆಯಲ್ಲಿ ಅವುಗಳನ್ನು ಅಳವಡಿಸುವುದಕ್ಕೆ ಶಿಫಾರಸ್ಸು ಮಾಡುವುದು

v. ಈಗಿರುವ ಎಂ ಎಸ್ ಎಂ ಇ ಕೇಂದ್ರಿತ ನೀತಿಗಳನ್ನು ಮತ್ತುವಲಯದ ಮೇಲೆ ಅವುಗಳ ಪರಿಣಾಮಗಳನ್ನು ಗಳನ್ನು ಪರಾಮರ್ಶಿಸುವುದು

vi. ವಲಯದ ಶೀಘ್ರ ಬೆಳವಣಿಗೆಗೆ ಶಕ್ತಿ ನೀಡುವ ಕ್ರಮಗಳನ್ನು ಪ್ರಸ್ತಾಪಿಸುವುದು

vii. ಎಂ ಎಸ್ ಎಂ ಇ ವಲಯದ ಆರ್ಥಿಕ ಮತ್ತು ಹಣಕಾಸು ಸ್ಥಿರತೆಯನ್ನು ಕಾಪಾಡುದಕ್ಕೆ ದೀರ್ಘಾವದೀಯ ಪರಿಹಾರಗಳನ್ನು ಶಿಫಾರಸ್ಸು ಮಾಡುವುದು

ತಜ್ಞ ಸಮಿತಿಯು ತನ್ನ ವರದಿಯನ್ನು 2019 ರ ಜೂನ್ ಕೊನೆಯಲ್ಲಿ ಮಂಡಿಸುವುದು

**ಜೋಸ್ ಜೆ. ಕಟ್ಟೂರ್**
ಮುಖ್ಯ ಮಹಾ ವ್ಯವಸ್ಥಾಪಕರು

**ಪತ್ರಿಕಾ ಪ್ರಕಟಣೆ: 2018-2019/1540**